





‘ಮಯೂರ’ ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1976ರ ಅಕ್ಟೋಬರ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ. ಚಿತ್ರ ಚಂದ್ರನಾಥ ಆಚಾರ್ಯ ಅವರದು.

ಇದೊಂದು ದೊಡ್ಡ ತೊಂದರೆ. ಅವಳದ್ದೇನು ತಪ್ಪು. ಪಾಪ, ಅವಳು ಕೆಲಸ ಮಾಡುವ ಅಕೌಂಟ್ಸ್ ಸೆಕ್ಷನ್ ಯಾವಾಗಲೂ ಹೀಗೆಯೇ. ಇವಳಿಗೋಸ್ಕರ ಹೀಗೆ ಕೊನೆಗಳಿಗೆಯವರೆಗೂ ಕಾಯುವುದು, ಇದೆಷ್ಟನೆಯ ಸಲವೊ! ಇನ್ನೇನು ಫಿಲ್ಮ್ ಪ್ರಾರಂಭವಾಗಬೇಕು. ಇವಳು ಬರಲಿಲ್ಲ. ಎಂದು ಬಯ್ದುಕೊಳ್ಳುತ್ತಾ ಇನ್ನೇನು ಒಳಗೆ ಕಾಲಿಡಬೇಕು, ಆಗ ಇವಳು ಏದುತ್ತಾ ಓಡಿಬಂದು, ‘ಐ ಆ್ಯಮ್ ಸಾರಿ ಆನಂದ್, ಈ ಸಾರಿ ಕ್ಷಮಿಸಿಬಿಡಿ’ ಎನ್ನಬೇಕು.